ಗೊತ್ತಲ್ಲ. ಹತ್ರಾನೇ ಅಂಗ್ಡಿ, ಹೋಟೆಲ್ ಇದೆ... ಅರ್ಧ ಫರ್ಲಾಂಗ್‌ನಲ್ಲಿ ಮೆಡಿಕಲ್ ಶಾಪಿದೆ.... ಏನಾದ್ರೂ ಪ್ರಾಬ್ಲಮ್ ಇದ್ರೆ... ಮೋಹನ್ ಹತ್ರ ಕೇಳ್ಬೇಡಿ.. ನನ್ಹತ್ರ ಹೇಳ್ಬೇಕು.. ತಿಳೀತಾ?'

'ಆಯ್ತು' ಎಂಬರ್ಥದಲ್ಲಿ ಭವಾನಿ ತಲೆಯಾಡಿಸಿದಳು. ಪ್ರಶ್ನೆ ಆರೆಂಟು ತಲೇಲಿ 'ಥಕಧಿಂ' ಮಾಡಿತ್ತು. ಸ್ನಾನ–ಊಟ–ತಿಂಡಿ–ವಿಶ್ರಾಂತಿ.. ಇವೆಲ್ಲ ಅನಂತಯ್ಯ ಭವಾನಿಗೇ ಒಂದ್ ಥರಾ. ಮಗ – ಸೊಸೆಗೇ ಇನ್ನೊಂದು ಥರಾ ಆಗ್ತಿದೆ. ಮಗ–ಸೊಸೆ ರೂಮಲ್ಲಿ ಕಚ ಪಚ ಹಿಂದಿಯಲ್ಲಿ–ಇಂಗ್ಲಿಷ್‌ನಲ್ಲಿ ಮಾತಾಡಿಕೊಳ್ಳುತ್ತಾರೆ. ತಾಯ್ತಂದೆಗೆ ಅಲ್ಲಿ ಪ್ರವೇಶ ನಿಷಿದ್ಧ! ಒಳಗೆ ಹೊಕ್ಕಾಕ್ಷಣ ಬೋಲ್ಟ್ ಜಡೀತಾರೆ. ಓಪನ್ ಕ್ಲೋಸ್ ಮೂಲಕ ಎಂಬಂತೆ. ಬೆಳಿಗ್ಗೆ ತಿಂಡಿ ಮುಗಿದಾಕ್ಷಣ ಭವಾನಿ ನೀರು ನೋಡಬೇಕು. ಅನಂತಯ್ಯ ತರಕಾರಿ–ಸಾಮಾನು ತರಬೇಕು. ಮೋಹನ್ ಒಂಬತ್ತಕ್ಕೆ, ಸ್ಮಿತಾ ಒಂಬತ್ತೂವರೆಗೆ ಕಚೇರಿಗೆ ಹೊರಡ್ತಾರೆ. ಸ್ಮಿತಾ ತಮ್ಮ ಖಾಸಗಿ ಕೋಣೆಗೆ ಬೀಗ ಜಡಿದೇ ಓಡುತ್ತಾಳೆ. ಅಲ್ಲಿನ ಅಲಂಕಾರ ಕಾಣೋ ಆಸೆ ಇವರಿಬ್ಬರಿಗೂ, ಅದೇ ಶೂನ್ಯ! ಸ್ಮಿತಾ ಕಾಸು ಬಿಚ್ಚಲ್ಲ. ಅನಂತಯ್ಯಗೆ ತಂದಿರೋ ಹಣ ಖತಮ್ಮಾಗ್ತಿದೆ. ಪೆನ್ಷನ್ ಹಣ ಬರೋವರ್ಗೆ ಶಿವ ಶಿವಾ ಅನ್ನಬೇಕು. ಹಾಗೆ ಮಗ ಮೋಹನ್ ಸದಾ ಉರಿ ಮುಸುಡಿಯಲ್ಲಿರುತ್ತಾನೆಂತಾ ಕುಮ್ಟೇಂದಾ ಬಂದ ನಾಲ್ಕು ದಿನದಲ್ಲಿ ಅನಂತಯ್ಯಗೆ ಅರ್ಥವಾಗಿದೆ. ಭವಾನಿ ಮೃದು ಸ್ವರದಲ್ಲಿ, 'ಪಾಪ.. ಮನೆ ಮೇಲೆ ಸಾಲ ಸುಮ್ ಸುಮ್ನೆ ಗರಮ್ ಆಗ್ಬೇಡ್ರೀ.. ಸ್ಮಿತಾ ಕೊಲ್ಲಾಪುರ್ದಲ್ಲಿ ಕಲಿತೋಳಂತೆ. ಗೊತ್ತಲ್ಲ.. ಲವ್ ಮ್ಯಾರೇಜ್.. ಇವ್ನ ಆಫೀಸ್‌ನಲ್ಲಿ ಬಿಸಿನೆಸ್ ಟಾಕ್ ಆಗ್ಲೇ ಇಬ್ರಲ್ಲೂ ಲವ್ ಕಿಕ್ ಆಗಿದ್ದಂತೆ. ರಿಜಿಸ್ಟರ್ ಮ್ಯಾರೇಜ್, ಸ್ಮಿತಾ ಎಜುಕೇಟೆಡ್, ಭೋ ಕಂಡಿಷನ್ ಹುಡ್ಗಿ... ತನ್ನಿಚ್ಛೆ ಅಂತೇನೇ ನಡೀಬೇಕು... ಅನ್ನೋಳು...'

ಮೊನ್ನೆಯ ಕಥೆ ನೆನಪಾಯ್ತಲ್ಲ. ಮೆತ್ತಗಿನ ಸ್ವರದಲ್ಲಿ, 'ಕೇಳ್ದೆಯಾ ಭವಾನಿ ಯಾರಿಗೋ ಮುನ್ನೂರು ರೂಪಾಯಿ ಡೊನೇಷನ್ ಕೊಡ್ಚನದು. ಕೊಡ್ಬೇಕೂಂತಾ ಇವ್ನು ಬ್ಯಾಡಾಂತಾ ಅವ್ಳು. ಇಬ್ರಲ್ಲೂ ಬಿಸಿಬಿಸಿ ಮಾತು, ಏನೋ ಬಿತ್ತು ಏನ್ ಒಡೆಯಿತೋ.. ಇಂವ ಅರಚಿದ್ದ ಅವ್ಳು ಅತ್ತ ದನಿ ನಂಗೆ ಕೇಳಿಸ್ತು. ವಿಷ್ಯ ಅಂತೂ ವಿರಸಕ್ಕೇ ಟರ್ನ್ ಆಗಿತ್ತು' ಮುಂದಾಡದಂತೆ ಭವಾನಿ ತುಟಿ ಮೇಲೆ ಬೆರಳಿಟ್ಟು ಸಂಜ್ಞೆ ಮಾಡಿದ್ನಂತ್ರ, 'ಪ್ರಾಬ್ಲಮ್ ಗಂಡ ಹೆಂಡ್ತಿ ಅಂದ್ಮೇಲೆ ಬರ್ತದೆ... ಇರ್ತದೆ... ಹಾರ್ತದೆ... ಹೋಗ್ತದೆ ಹೋಗ್ದೇ ಇರ್ತದ್ಯಾ, ಪುಣ್ಯಾಕ್ಕೆ ನಿಮ್ಗೆ ಉತಾವಳಿ ಹೆಚ್ಚು.... ಏನ್ಕತೇಂತಾ ನೀವ್ ಹೆಂಡ್ತಿ ಗಕ್ಕನೆ ಮಧ್ಯೆ ಬಾಯಿ ಹಾಕ್ಲಿಲ್ವಲ್ಲ... ನಮ್ಗೆ ಅವ್ರ ಖಾಸಗಿ ವಿಷ್ಯ ಎಂತಕೇಂತಾ... ಸುಮ್ನಿದ್ಬಿಡಿ...' ಅಂದಳಲ್ಲ, ಅನಂತಯ್ಯ ಮುಗುಳ್ನಕ್ಕು, 'ಈಗ ಹಾಂಗೇ ಇದೀನಲ್ಲಾ ಮಾರಾಯ್ತಿ' ರಾಗದಲ್ಲಿ ತಾವು ಸಂಬಂಧ ಇಲ್ದೋರ ಥರಾ ಅಲ್ವಾ?' ಅನ್ನಿಸ್ತು.

ಕುಮ್ಟೇಂದ ಕೆಲಸಕ್ಕಿದ್ದ ಹೆಂಗ್ಸು ತುಳಸಿಯ ಫೋನು ಬಂದಿತ್ತು. ನಾ ಇನ್ಮೇಲೆ ನಿಮ್ಮನೆ ಕೆಲ್ಸ ಮಾಡ್ಲಿಕ್ಕಾಗ್ತಿಲ್ಲ ನಮ್ ಸೊಸೆ ಹಡೆದಿದಾಳೆ ಸರ್ಕಾರಿ ಆಸ್ಪತ್ರೆಲಿ' ಅಂದಿದ್ದಳು. 'ಮೂರ್ನಾಲ್ಕು ತಿಂಗ್ಳು ಚಕ್ಕರೆ ಕಾಣ್ತದೆ' ಅನಂತಯ್ಯ ತೀರ್ಪು ಕೊಟ್ಟರು. ಭವಾನಿ ನಸುನಕ್ಕಳು. ಅತ್ತೆ–ಮಾವ ಬಳಸುತ್ತಿದ್ದ ಊಟ–ತಿಂಡಿಯ ಪಾತ್ರೆ, ಬಟ್ಟೆ, ವಸ್ತು, ಸಾಬೂನು– ಎಲ್ಲಾನೂ ಸ್ಮಿತಾ ಪ್ರತ್ಯೇಕವೇ ಇಟ್ಟು ಮಡಿ ಪ್ರದರ್ಶಿಸುತ್ತಿದ್ದಳು. ಹೊಟೇಲ್‌ನಿಂದ ತಾನು ಏನೇನೋ ತಿಂಡಿ–ಅದು ಇದು ಗಮ್ಮತ್ತಲ್ಲಿ ತಂದರೆ ಸೀದಾ ತಮ್ಮ ಕೋಣೆಗೆ ಸಾಗಾಟ! ಇಂಥ ದೃಶ್ಯ ಕಂಡಾಗ ಭವಾನಿಗೆ ಕರುಳು ಚುಚಕ್ ಆಗುತ್ತಿತ್ತು. ಮಗ ಮೌನದ ಮುದ್ರೆ, ಆಡಿದ್ರೆ ಖಡಕ್. ಈಗೀಗ ಮಮತೆಯ ಮಾತುಕಥೆ ಹಾಗಿರಲಿ, ಕುಮ್ಟೆ ಮನೆಯ ಕಥೆ, ಊರ ಸುದ್ದಿ, ತಾಯ್ತಂದೆಯ ಆರೋಗ್ಯ ಸ್ಥಿತಿಯ ಬಗ್ಗೆ. ಉಹುಂ. ನಿರಾಸಕ್ತಿ ಅನ್ನೋದಕ್ಕಿಂತ ತಟಸ್ಥ ಅನ್ನುವಂತಾಗಿದ್ದಾನೆ.

ಅನಂತಯ್ಯಗೆ ಮಗನ ಮಮಕಾರ ಥೇಟ್ 'ಖೋಟಾ ನೋಟು'– ಅಂತಾ ಮೊದ್ಲಿಂದ್ಲೂ ಗೊತ್ತು. ಆದರೆ 'ಮೌನಂ ಕಲಹಂ ನಾಸ್ತಿ' ಮಾಡಿಕೊಂಡಿದ್ದರು. ಭವಾನಿಗೆಲ್ಲಿ ಮನ್ಸು ತಡೆದೀತು. ಸೊಸೆಯೆದುರೇ ಸಹಜವಾಗಿ ಪ್ರಶ್ನಿಸಿದರೂ ಮಗ–ಸೊಸೆಯ ರೆಡಿಮೇಡ್ ಉತ್ತರ 'ಹ್ಞಾಂ.. ಹೂಂ... ಉಹುಂ.... ನೋಡೋಣ' ಅಂತಾನೇ ಥೇಟ್ ಹಾರಿಕೆಯ ಉತ್ತರ ಪಟಪಟಾಂತ ಸಿಡಿಯುತ್ತಿತ್ತು. ಅತ್ತೆ ಕಾಲು ನೋವಿಂದ ನರಳುತ್ತ–ತುಸು ಕುಂಟುತ್ತ ಓಡಾಡುತ್ತಿದ್ದ ದೃಶ್ಯ ಕಾಣುತ್ತಿದ್ದ ಸ್ಮಿತಾಗೆ ಪ್ರಶ್ನಿಸೋದಿರಲಿ; ಕುತೂಹಲವನ್ನೂ ಕೆರಳಿಸಲಿಲ್ಲ. ಸ್ನಾನ ಆದ ಮೇಲೆ ಭವಾನಿನೇ, 'ಮೆಡಿಕಲ್ ಸ್ಟೋರ್ ಹತ್ತಿರಾನೇ ಇದೆಯಂತಲ್ಲ, ಹೋಗಿ ಎಂಥಾದಾದ್ರೂ ಆಯಿಂಟ್ಮೆಂಟ್ ತಕ್ಕಂಡ್ ಬನ್ನಿ'.

'ನಾನೇ ಕೇಳ್ಬೇಕು ಅನ್ಕಂಡಿದ್ದೆ ಭವಾನಿ... ಕುಮ್ಟೆ ಮನೇಲ್ಲಾದ್ರೆ, ಆ ತುಳಸಿ ಹತ್ರಾನಾದ್ರೂ ಚೀಟಿ ಕೊಟ್ಟು ತರಿಸ್ಬಹುದಿತ್ತು. ಇಲ್ಲಿ?' ಈ ಮಾತು ರೂಮಿಗೆ ಹೊರಡುತ್ತಿದ್ದ ಮಗ ಸೊಸೆಯ ಕಿವಿಗೆ ಭಸಕ್ಕಾಗಿದೆ ಮಾತಾಡಲಿಲ್ಲ. ಸ್ಮಿತಾ ಅತ್ತೆಯ ಮುಖ ನೋಡಿದಳಷ್ಟೇ, ಇಬ್ಬರೂ ಆಫೀಸಿಗೆ ಹೋದ ನಂತರ; ಟೀ ಕುಡಿದಾದ ನಂತ್ರ ಅನಂತಯ್ಯ,

'ಕೇಳ್ದೆಯಾ ಭವಾನಿ... ಬ್ಯಾಂಕ್‌ನ ಎ.ಟಿ.ಎಮ್. ನಿಂದ ಪೆನ್ಷನ್ ದುಡ್ಡು ತಕ್ಕಂಡ್ಬಂದೆ. ಬಂದು ಇಷ್ಟು ದಿನ ಆತು.. ಡಯಾಬಿಟೀಸ್‌ನಿಂದ ನರಳ್ತಿರೋ ಈ ಅಪ್ಪ ಕೈಕಾಲು ಗಂಟು ನೋವಿಂದ ಒದ್ದಾಡ್ತಿರೋ ಅಮ್ಮ ಇಬ್ರೂ ಕಣ್ಮುಂದೆ ಬದ್ಕಿದಾರೆ ಅನ್ನೋದನ್ನೇ ಮರೆತ್ಹಂಗೆ ತಾವಾಯ್ತು. ತಮ್ಮ ಓಡಾಟ–ತಿನಿಸಾಟ– ಇದ್ರಲ್ಲೇ ಮುಳುಗಿದಾರೇಂತಾ ನಿಂಗರ್ಥ ಆಗ್ತಿದೆಯಾ?'

ಯಾಕೋ ಪ್ರಶ್ನೆಯ ಧಾಟಿ ತೀಕ್ಷ್ಣದ್ದೆಂತಾ ಗಂಡ ಆಡಿರೋ ಮಾತೇ ಪಕ್ಕಾ ಧ್ವನಿಸುತ್ತಿದೆ. ಭವಾನಿ ಇವೆಲ್ಲ 'ಸಾಮಾನ್ಯ ದೃಶ್ಯ ಬಿಡ್ರೀ' ಎಂಬಂತೆ 'ನೋಡಿ ನಿಮ್ಗೆ ಪೇಪರ್ ಓದೋದು... ಸ್ನಾನ...ತಿಂಡಿ.. ಅಂಗ್ಡೀಂದ ತರಕಾರಿ... ಇಷ್ಟೇ ಅಲ್ವಾ ಕೆಲ್ಸಾಂದ್ರೆ.. ಮಗ ಸೊಸೆ ಸಂಜೆ ದುಡಿದು ದಣಿವಾಗಿ ಬರ್ತಾರೆ... ತಮ್ಮ ಅಡುಗೆ ತಾವು ಏನ್ಬೇಕೋ ಬೇಯಿಸ್ಕೊಂಡ್ ಉಣ್ತಾರೆ. ಉಸ್ಸಂತಾ ಮಲಕ್ಕೋತಾರೆ... ಮದ್ವೆ ಆಗಿ ಎರಡ್ವರ್ಷ ಆಗ್ತಿದೆ.. ಅವ್ಳು ಹೊಟ್ಟೆ ಏನೂ ಮಾತಾಡಲ್ಲಾ.. ಕೇಳ್ದೆ.. ಪ್ಲಾನಿಂಗ್ ಅಂದ್ಲು ಆ ಪ್ಲಾನಿಂಗ್ ಮುಗಿಯೋದ್ಯಾವಾಗ... ನಾನ್ ಮೊಮ್ಮಗನನ್ನು ಎತ್ಕೊಂಡ್ ಮುದ್ದಾಡ್ತಾ ಆಡಿಸೋದ್ಯಾವಾಗ 'ಭಗ್ವಂತಾ ಖರೇಗ್ಲೂ ಅದೇ ಚಿಂತೆ ಆಗ್ಬಿಟ್ಟಿದೇರಿ... ಅಂಕೋಲೆ ದೇವ್ರ ಆಣೇಗ್ಲೂ!'

'ನಿಂಗೊಂದ್ ಥರಾ ಹುಚ್ಚು ಸುರುವಾಗ್ತಿದೆ.. ಅರ್ವತ್ತಕ್ಕಿನ್ನೂ ನಾಕಾರ್ ವರ್ಷ ಇದೆ ಕಣೇ ಎಲ್ಲ ಆಸೆ ಹೊತ್ಕೊಂಡ್.. ದಿನ ಹೋದ್ಹಂಗೆ ಕಡ್ಡಿ ಆಗ್ತಿದೀಯಾ... ಅವ್ರ ಸೈಕಾಲಜಿ ನಿಂಗೆ ಅರ್ಥಾನೇ ಆಗಲ್ಲಾ... ಬಿಡು... ನಾನ್ಹೋಗ್ಬರ್ತೀನಿ... ಕೆಲ್ಸದ ಹೆಂಗ್ಸು ಬಂದ್ರೆ ಕಿಟಕೀಲಿ ಬಗ್ಗಿ ಯಾರೂಂತಾ ಸಮ ನೋಡ್ಕಂಡ್ ಡೋರ್ ಓಪನ್ ಮಾಡು– ಅವಸರ ಮಾಡಬ್ಯಾಡಾ. ಇದು ಬೆಂಗ್ಳೂರು ತಿಳೀತಾ?'

'ಬಂದು ಇಷ್ಟು ದಿನ ಆತು ಅರ್ಥ ಆಗ್ದೇ ಇರ್ತದ್ಯಾ? ಮೊದ್ಲು ಅಂಗ್ಡಿಗೆ ಹೋಗ್ಬನ್ನಿ' ಹೌದಲ್ಲಾ ಅನ್ನಿಸಿ ಅನಂತಯ್ಯ ಮುಲಾಮು– ನಾಲ್ಕು ಗುಳಿಗೆ ಅಂಗ್ಡೀವ್ನು ಕೊಟ್ಟಿದ್ದು ತಂದುಕೊಟ್ಟರು. ಭವಾನಿ ಆ ಮುಲಾಮನ್ನು ಗಸಗಸ ತಿಕ್ಕಿಕ್ಕೊಂಡು, ಗುಳಿಗೆ ಗುಳುಕ್ ಮಾಡಿದಳು.

ರಾತ್ರಿ ಹಾಲ್‌ನಲ್ಲಿ ಹಾಸಿಗೆ ಹಾಯ್ ಅನ್ನಿಸದಿದ್ದರೂ ಮಲಗಿದ್ದ ಅನಂತಯ್ಯ, ಹೆಂಡತಿಯ ಕಿವಿ ಹತ್ತಿರ ಸರಿದು, 'ಒಂದೇ ಮನೇಲ್ಲಿ ಒಂದೇ ಕುಟುಂಬದ ಮೆಂಬರ್ಸ್ ಪಾಲಾಗಿ ಹೋದ್ಹಂಗೆ ಎರ್ಡು ನಮೂನೆ ಅಡುಗೆ.. ಪಾತ್ರೆ ಪಡಗಾ ಎಲ್ಲ ಬ್ಯಾರೆ ಬ್ಯಾರೆ ಮಾಡ್ಕಂಡ್ ಒಂದು ಲೋಟ ನೀರು ನೀ ಮುಟ್ಟಿದ್ದಲ್ವಾಂತ ಬದಿಗೆ ದಬ್ಬಿ ಹಾಕ್ತಾಳಲ್ಲಾ ನಿನ್ ಸೊಸೆನಾ ಕಂಡಿಲ್ಲಾಂದ್ಕಂಡ್ಯಾ ಭವಾನಿ... ನಿನ್ ಸಹನಶಕ್ತಿ ಮೆಚ್ಕೊಬೇಕು.. ಆದ್ರೆ ನಂಗೆ ತ್ರಿಶಂಕು ಸ್ಥಿತಿ...'

ಅದಕ್ಕೆ ಭವಾನಿ... 'ಹೂಂ... ಹೂಂ..' ದನಿ ಜಾರಿಸಿದ್ದು ಅರೆನಿದ್ರಾವಸ್ಥೆಯಲ್ಲೇ! ಬೆಳಿಗ್ಗೆ ತಿಂಡಿ ತಿನ್ನುತ್ತಿದ್ದಾಗ ರಾತ್ರಿನೇ ಠರಾಯಿಸಿಕೊಂಡಿದ್ದರೇನೋ ಉತ್ಸಾಹಶೀಲೆ ಸ್ಮಿತಾ, ಅತ್ತೆಯ ಹತ್ತಿರ ಬಂದು ನಯಸ್ವರದಲ್ಲಿ,

'ನನ್ ಪೇರೆಂಟ್ಸ್ ಸಂಡೆ ಮುಂಬೈಯಿಂದ ಫ್ಲೈಟ್‌ನಲ್ಲಿ ಬರ್ತಿದಾರೆ...'

'ಭೋ ಖುಷಿ ಆತು... ಸ್ಮಿತಾ ನಾವೂ ನಾಕು ದಿನ ಅವ್ರ ಜತೆ ಸೇರ್ಕಂಡ್ ಪ್ರೀತಿಲ್ಲಿ ಮಾತಾಡ್ಕಳ್ತಾ ಕಾಲ ಕಳೀಲಿಕ್ಕಾಗ್ತದೆ. ಹೂಂ ಕಣೆ, ಖರೇಗ್ಲೂ ಖುಷಿದೇ ವಿಷ್ಯ..ಅವತ್ತು ನೀ ಸೂ.. ಅಂದಿದ್ದೆ ಖರೆ. ಆದ್ರೆ ಡೇಟ್ ಹೇಳಿರ್ಲಿಲ್ಲ...'

'ಯಾಕೆ ಮೋಹನ್ ನಿಮ್ಹತ್ರ ಪ್ರಸ್ತಾಪ ಮಾಡ್ಲಿಲ್ವಾ?'

ಉಬ್ಬಿ ಬೋಂಡಾ ಆದಂತಾಗಿದ್ದ ಭವಾನಿಗೀಗ ಮಗನ ಮುಗ್ಧ ಮೌನವೇ ಹೌದೂಂತಾ ಸಾಬೀತು ಮಾಡ್ತು. ಸ್ಮಿತಾ ಆ ಕ್ಷಣವೇ ಬಾಯ್ಬಿಟ್ಟು ಹೇಳು ಅಂದಿದ್ದೆ... ಅವ್ನ ಕೆಲ್ಸ ಎಲ್ಲ ಹಾಗೇನೇ, ಮುಗುಮ್.. ನಾ ಹೇಳ್ತೀನಿ ಅತ್ತೇವ್ರೇ... ನನ್

